ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಸಿನಿಮಾಟೊಗ್ರಫರ್ ವಿ.ಕೆ. ಮೂರ್ತಿ ಅವರ ಗರಡಿಯಲ್ಲಿ ಪಳಗಿದ ಬಿ.ಎಸ್. ಬಸವರಾಜು ಕನ್ನಡ ಚಿತ್ರರಂಗದ ಹಿರಿಯ ತಂತ್ರಜ್ಞರಲ್ಲೊಬ್ಬರು. ಪೂರ್ಣಪ್ರಮಾಣದ ಸಿನಿಮಾ, ಕಿರುಚಿತ್ರ ಎಲ್ಲವೂ ಸೇರಿ ಸುಮಾರು 1300 ಪ್ರಯೋಗಗಳಿಗೆ ಮುಖ ಮಾಡಿದ ಅಪೂರ್ವ ಅನುಭವ ಅವರದ್ದು. ಕನ್ನಡ ಮಾತ್ರವಲ್ಲದೆ, ತಮಿಳು, ಹಿಂದಿ ಹಾಗೂ ಒರಿಯಾ ಸಿನಿಮಾಗಳಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ ಅವರ ಸಿನಿಮಾಗಳ ಭಾಗವಾಗಿದ್ದಾರೆ. 2018ನೇ ಸಾಲಿನ ಜೀವಮಾನದ ಸಾಧನೆಗೆ ರಾಜ್ಯ ಸರ್ಕಾರದಿಂದ 'ವಿಷ್ಣುವರ್ಧನ್' ಪ್ರಶಸ್ತಿ ಪಡೆದ ಹಿರಿಮೆ ಅವರದು. ಸಿನಿಮಾ ಇತಿಹಾಸದ ನೆನಪಿನ ಕಣಜದಂತೆಯೂ, ಜೀವನೋತ್ಸಾಹದ ಬತ್ತದ ಒರತೆಯಂತೆಯೂ ಕಾಣುವ ಬಸವರಾಜು ಅವರೊಂದಿಗೆ 'ಮಯೂರ'ಕ್ಕಾಗಿ ನಡೆಸಿದ ವಿಶೇಷ ಸಂದರ್ಶನ ಇಲ್ಲಿದೆ.

# ಸಿನಿಮಾಟೊಗ್ರಾಫರ್ ಬಿ.ಎಸ್. ಬಸವರಾಜು ಸಂದರ್ಶನ

**◆ ನೀವು ಸಿನಿಮಾ ರಂಗಕ್ಕೆ ಬಂದುದು ಹೇಗೆ? ಕುಟುಂಬದ ಹಿನ್ನೆಲೆ ಏನು?**

ನನ್ನ ತಂದೆ ಕೆ.ಬಿ. ಶಿವಪ್ಪ. ತಿಪಟೂರಿನಲ್ಲಿ ಕೊಬ್ಬರಿ ವ್ಯಾಪಾರ ಮಾಡುತ್ತಿದ್ದವರ ಕುಟುಂಬ ನಮ್ಮದು. ಹೈಸ್ಕೂಲಿನವರೆಗೆ ಓದಿದ್ದು ಅಲ್ಲೇ. ಆಮೇಲೆ ಶಿವಮೊಗ್ಗಕ್ಕೆ ಹೋದೆ. ಪಿಯು ಹಾಗೂ ಪದವಿ ಓದಿದ್ದು ಅಲ್ಲಿ. ಬಿ.ಎಸ್ಸಿ ತರಗತಿಗೆ ಸೇರಿದ್ದೆನಾದರೂ ಪೂರ್ಣಗೊಳಿಸಲಿಲ್ಲ. ಪದವಿ ಓದಿಬಿಟ್ಟರೆ ಸರ್ಕಾರಿ ಕೆಲಸಕ್ಕೆ ಸೇರಿಸಿಬಿಡುತ್ತಾರೆ ಎನ್ನುವುದು ನಮ್ಮೆಲ್ಲರ ಭಾವನೆ. ನನಗೆ ಅಂತಹ ಕೆಲಸದಲ್ಲಿ ಆಸಕ್ತಿ ಇರಲಿಲ್ಲ. ಆಗಲೇ ನಾನು ಚಿತ್ರಗಳನ್ನು ಬಿಡಿಸುತ್ತಿದ್ದೆ. ಪೆನ್ಸಿಲ್ ಸ್ಕೆಚ್ ಮಾಡುತ್ತಿದ್ದೆ. ನನ್ನ ಅಣ್ಣ ಪದವಿ ಮಾಡಿ, ಬ್ಯಾಂಕ್‌ನಲ್ಲಿ ಕೆಲಸ ಹಿಡಿದು ಊರಿಗೆ ಬಂದ. ನಾನು ಏನಾದರೂ ಸ್ವಂತ ಉದ್ಯಮ ಮಾಡಬೇಕೆಂಬ ಕನಸು ಹೊತ್ತು ಬೆಂಗಳೂರಿನಲ್ಲಿ ಒಂದು ಕಂಪನಿಯಲ್ಲಿ ಸೇಲ್ಸ್‌ಮ್ಯಾನ್ ಕೆಲಸಕ್ಕೆ ಸೇರಿದೆ.

ನನ್ನ ತಾಯಿಯ ಅಣ್ಣಂದಿರೆಲ್ಲ ಎಂಜಿನಿಯರ್‌ಗಳು, ವೈದ್ಯರಾಗಿದ್ದರು. ಅವರ ಮನೆಯ ಕಡೆಯವರಿಗೆ ಹೊಸ ಕೋರ್ಸ್‌ಗಳ ಬಗ್ಗೆ ಚೆನ್ನಾಗಿ ಅರಿವಿತ್ತು. ನನ್ನ ಸಹೋದರ ಸಂಬಂಧಿ ಒಬ್ಬರು 'ಶ್ರೀಜಯಚಾಮರಾಜೇಂದ್ರ ಪಾಲಿಟೆಕ್ನಿಕ್' (ಎಸ್‌ಜೆಪಿ) ಸೇರುವಂತೆ ಸಲಹೆ ನೀಡಿದರು. ಪ್ರತಿಭಾವಂತರಿಗೆ ಅಲ್ಲಿ ಕಲಿಯಲು ಒಳ್ಳೆಯ ಅವಕಾಶ ಸಿಗುತ್ತದೆ ಎಂದರು.

ನಮ್ಮೂರಿನಲ್ಲಿ 'ವಿನೋದಾ' ಟಾಕೀಸ್ ಇತ್ತು. ಟೆಂಟ್ ಸಿನಿಮಾಗಳೂ ಬರುತ್ತಿದ್ದವು. ಅಲ್ಲದೆ ಕಂಪನಿ ನಾಟಕಗಳ ಪ್ರದರ್ಶನವೂ ನಡೆಯುತ್ತಿತ್ತು. ನನ್ನ ತಾಯಿಯ ಜೊತೆಗೆ ಸಿನಿಮಾಗಳನ್ನು ನೋಡಲು ಹೋಗುತ್ತಿದ್ದೆ. ಸುಬ್ಬಯ್ಯ ನಾಯ್ಡು, ಗುಬ್ಬಿ ವೀರಣ್ಣನವರ ಕಂಪನಿಗಳು ಬಂದು ವರ್ಷಗಟ್ಟಲೆ ಟೆಂಟ್ ಹಾಕುತ್ತಿದ್ದವು. ಆ ನಾಟಕಗಳನ್ನು ಆಸಕ್ತಿಯಿಂದ ನೋಡುತ್ತಿದ್ದೆ. ನಾಟಕಗಳನ್ನು ನೋಡುವುದು ಒಂದು ರೀತಿಯ ಹಿತಾನುಭವ. ಅರಸೀಕೆರೆ, ಚಿಕ್ಕನಾಯಕನಹಳ್ಳಿ ಎಲ್ಲಿಯೇ ನಾಟಕಗಳಾದರೂ ಗುಬ್ಬಿ ವೀರಣ್ಣನವರ ಕಂಪನಿ ತಿಪಟೂರಿನಲ್ಲಿಯೇ ತಂಗುವುದನ್ನು ಅಭ್ಯಾಸ ಮಾಡಿಕೊಂಡಿತ್ತು. ಅಲ್ಲಿ ಮೈಲಾರಪ್ಪನ ಛತ್ರ ಇತ್ತು. ರಾಜ್‌ಕುಮಾರ್ ಅವರಂತಹ ಅನುಭವಿ ನಟರೂ